ಓಎಸ್. 456/2025 ಪಿಡಬ್ಲ್ಯೂ:1

ದಿನಾಂಕಃ 03.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ

ನಾನು ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. ಅದರಲ್ಲಿರುವ ಅಂಶಗಳು ಸರಿಯಾಗಿದ್ದು, ನಾನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ. ಈ ಕೆಳಕಂಡ ದಾಖಲಾತಿಗಳನ್ನು ಹಾಜರು ಮಾಡಿರುತ್ತೇನೆ.

ದಿನಾಂಕ 25.10.2019 ರಂದು ಬರೆಯಲಾದ ಭೋಗ್ಯ ಪತ್ರ ಸಂಖ್ಯೆ 8034/2018 ರ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-1 ಎಂದು, ಅಟ್ಟಗುಳಿಪುರದ ಸರ್ವೆ ನಂಬರ್ 94ರ 5 ಪುಟಗಳ ಪಹಣಿ ಪತ್ರಿಕೆಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-2 ಎಂದು, ದಿನಾಂಕ 08.10.2025 ರಂದು ಪ್ರತಿವಾದಿಗಳಿಗೆ ನೀಡಿದ ನೋಟೀಸ್ ನ ಕಚೇರಿ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-3 ಎಂದು, ಮೂರು ಅಂಚೆ ರಶೀದಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಪಿ-4 ರಿಂದ 6 ಎಂದು, ಕೋಯಿಲಮ್ಮರವರಿಗೆ ಕಳುಹಿಸಿದ ನೋಟೀಸ್ ನ ಪ್ರತಿಯನ್ನು ಮುಚ್ಚಿದ ಲಕೋಟೆಯಿಂದ ತೆಗೆದು ಅದನ್ನು ನಿಪಿ-7 ಎಂದು, ಲಕೋಟೆಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. 1ನೇ ಪ್ರತಿವಾದಿಗೆ ಕಳುಹಿಸಿದ ನೋಟೀಸ್ ನ ಪ್ರತಿಯನ್ನು ಮುಚ್ಚಿದ ಲಕೋಟೆಯಿಂದ ತೆಗೆದು ಅದನ್ನು ನಿಪಿ-8 ಎಂದು, ಲಕೋಟೆಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು. 2ನೇ ಪ್ರತಿವಾದಿಗೆ ಕಳುಹಿಸಿದ ನೋಟೀಸ್ ನ ಪ್ರತಿಯನ್ನು ಮುಚ್ಚಿದ ಲಕೋಟೆಯಿಂದ ತೆಗೆದು ಅದನ್ನು ನಿಪಿ-9 ಎಂದು, ಲಕೋಟೆಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು.

ಆದ್ದರಿಂದ ವಾದಿಯ ದಾವೆಯನ್ನು ಡಿಕ್ರಿ ಮಾಡಬೇಕಾಗಿ ಪ್ರಾರ್ಥನೆ.

ಪ್ರತಿವಾದಿಗಳು ಏಕಪಕ್ಷೀಯವಾದ್ದರಿಂದ ಪಾಟೀಸವಾಲು ಇರುವುದಿಲ್ಲ ಎಂದು ಪರಿಗಣಿಸಲಾಯಿತು.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇ ಒ.,

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಚಾಮರಾಜನಗರ.